ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.715/2021

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಶರಣಬಸಯ್ಯಸ್ವಾಮಿ** | | |
| **ತಂದೆಃಹೆಸರು** | **ಚನ್ನವೀರಯ್ಯಸ್ವಾಮಿ** | **ಪಿಡಬ್ಲೂಃ** | **11** |
| **ವಯಸ್ಸು** | **55 ವರ್ಷ** | **ಸಿಡಬ್ಲೂಃ** | **9** |
| **ಉದ್ಯೋಗಃ** | **ವ್ಯವಸಾಯ** | | |
| **ವಾಸ ಸ್ಥಳಃ** | **ಸಿಂಧನೂರು.** | | |

**ದಿನಾಂಕ 27-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1 ರಿಂದ 3 ರವರ ಪರಿಚಯ ಇಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ, ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ದಿ.18-12-2019 ರಂದು ರಾ.8-15 ಕ್ಕೆ ನಿಮ್ಮ ಗೆಳೆಯ ವೀರೇಶನ ಮನೆಯ ಮುಂದೆ ಆತನ ಜೊತೆಗೆ ನೀವು, ಚಾಸಾ-8 & 9 ರವರು ಮಾತನಾಡುತ್ತಾ ನಿಂತಿದ್ದಾಗ, ರಾ.8-30 ಕ್ಕೆ ಆರೋಪಿತರು ಏಕಾಏಕಿ ಚಾಸಾ-5 ರವರ ಮನೆಗೆ ನುಗ್ಗಿ 1ನೇ ಆರೋಪಿ ತನ್ನ ಮನೆಯ ಮುಂದಿರುವ ಬಂಕದಲ್ಲಿ ಕುಳಿತುಕೊಂಡಿದ್ದ ತನ್ನ ಹೆಂಡತಿ ಚಾಸಾ-1 ರವರ ಕೂದಲು ಹಿಡಿದು ಎಳೆದಾಡಿ, ಕಪಾಳಕ್ಕೆ ಹೊಡೆದು ಏನಲೇ ಸೂಳೆ ನಿನಗೆ ರೂ.5 ಲಕ್ಷ ವನ್ನು ಹೆಚ್ಚುವರಿಯಾಗಿ ವರದಕ್ಷಿಣೆ ತೆಗೆದುಕೊಂಡು ಬಾ ಎಂದು

ಕಳಿಸಿದರೆ ತರದೇ ಇಲ್ಲಿ ಆರಾಮವಾಗಿ ಇದ್ದೀಯಾ ಎಂದು ಬೈದು, ಹೊಟ್ಟೆಗೆ, ಬೆನ್ನಿಗೆ ಗುದ್ದಿ ಹೊರಗಡೆ ಎಳೆದುಕೊಂಡು ಬಂದಿದ್ದನು ಎಂದರೆ ಸರಿಯಲ್ಲ. 3ನೇ ಆರೋಪಿ ಆಕೆಯ ಕಪಾಳಕ್ಕೆ ಹೊಡೆದಿದ್ದನು ಎಂದರೆ ಸರಿಯಲ್ಲ. ಚಾಸಾ-1 ರವರ ಮಾವ ಆಕೆಯ ಸೀರೆ ಹಿಡಿದು ಎಳೆದಾಡಿ ಅವಮಾನ ಮಾಡಿದ್ದನು ಎಂದರೆ ಸರಿಯಲ್ಲ. ನಂತರ ಆರೋಪಿತರೆಲ್ಲರೂ ಕೂಡಿಕೊಂಡು ಕೈಗಳಿಂದ ಹೊಡೆಯುತ್ತಿದ್ದಾಗ ನಾನು, ಚಾಸಾ-7, 8, 10, 11 & 2, 3 ರವರು ಜಗಳ ಬಿಡಿಸಿದ್ದೆವು ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಲೇ ಸೂಳೆ ನೀನು ಮದುವೆ ಕಾಲಕ್ಕೆ ವರದಕ್ಷಿಣೆಯಾಗಿ ಕೊಟ್ಟಿರುವ ಬಂಗಾರ & ಬೆಳ್ಳಿಯ ಆಭರಣಗಳನ್ನು ಮಾರಿ, ಬಂದ ಹಣವನ್ನು & ರೂ.2 ಲಕ್ಷ ನಗದು ಹಣವನ್ನು ಸಂಸಾರಕ್ಕೆ ಖರ್ಚು ಮಾಡಿರುತ್ತೇವೆ, ನೀನು ರೂ.5 ಲಕ್ಷ ಹೆಚ್ಚುವರಿ ವರದಕ್ಷಿಣೆ ಹಣ ತಂದು ಕೊಡು ಎಂದು ಜೀವದ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ.ನಂತರ ಚಾಸಾ-5, 1 ರಿಂದ 3 ರವರು ಕೇಸು ಮಾಡಬೇಕೆಂದು ನಿರ್ಧರಿಸಿ ಸುದ್ದಿ ಗೊತ್ತಾದಾಗ ದಿ.01-01-2020 ರಂದು ಆರೋಪಿತರು ಚಾಸಾ-5 ರವರ ಮನೆಗೆ ಬಂದು, ಚಾಸಾ-5 ರವರ ತಾಯಿಯ ಅಣ್ಣ ಚಾಸಾ-4 ರವರಿಗೆ ಚಾಸಾ-1 ರವರನ್ನು ಚೆನ್ನಾಗಿ ನೋಡಿಕೊಳ್ಳುತ್ತೇವೆ ಎಂದು ಕರೆದುಕೊಂಡು ಹೋಗಿದ್ದರು, ಅದನ್ನು ನೀವು ನೋಡಿದ್ದೀರಿ ಎಂದರೆ ಸರಿಯಲ್ಲ.

ದಿ.23-05-2020 ರಂದು ಚಾಸಾ-5 ರವರ ಮನೆಗೆ ಹೋದಾಗ ಚಾಸಾ-1 ರವರು ಇದ್ದು, ಅವರನ್ನು ವಿಚಾರಿಸಿದಾಗ, ದಿ.22-05-2020 ರಂದು ರಾ.8 ಗಂಟೆಗೆ ಆರೋಪಿತರು ಚಾಸಾ-1 ರವರಿಗೆ ಲೇ ಸೂಳೆ ನೀನು ನಿನ್ನ ತವರು ಮನೆಗೆ ಹೋಗಿ ರೂ.5 ಲಕ್ಷ ಹಣವನ್ನು ತೆಗೆದುಕೊಂಡು ಬಾ ಎಂದು ಕೈಗಳಿಂದ ಹೊಡಿಬಡಿ ಮಾಡಿ ಮನೆಯಿಂದ ಹೊರಗೆ ಹಾಕಿದ್ದರು, ರಾ.10 ಗಂಟೆಗೆ ತವರು ಮನೆಗೆ ಬಂದಿರುತ್ತಾಳೆಂದು ಚಾಸಾ-5 ರವರು ನಿಮಗೆ ತಿಳಿಸಿದ್ದರು ಎಂದರೆ ಸರಿಯಲ್ಲ.

ಸದರಿ ವಿಚಾರವಾಗಿ ನಾನು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದಿರುವುದರಿಂದ, ಸಾಕ್ಷಿಯು ಪೋಲೀಸರಿಗೆ ನೀಡಿದ ಹೇಳಿಕೆಯನ್ನು ನಿಪಿ-17 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಸಿಂಧನೂರು.**